**( ದಿನಾಂಕ.28-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ಶ್ರೀ.B.A.D. ವಕೀಲರಿಂದ

1988 ರಲ್ಲಿ ನನ್ನ ತಂದೆ ನನ್ನ ಹೆಸರಿಗೆ ಒಂದು ಕಾಗದ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ನನ್ನ ತಂದೆ ಆ ಕಾಗದವನ್ನು ನೋಂದಣಿ ಕಚೇರಿಯಲ್ಲಿ ನೋಂದ ಮಾಡಿಕೊಟ್ಟಿದ್ದಾರೆ. ಆ ಕಾಗದವನ್ನು ನಾನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ಕಾಗದಕ್ಕೆ ಧನ್ನು ರಾಮಚಂದ್ರ ಸಾಕ್ಷಿದಾರರು ಅಂತ ಸಹಿ ಮಾಡಿದ್ದಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ಕಾಗದವನ್ನು ಬಿಳಿ ಹಾಳೆಯ ಮೇಲೆ ಬರೆದುಕೊಟ್ಟಿದ್ದಾರೆ. ಸ್ಟಾಂಪ ಪೇಪರ ಮೇಲೆ ಬರೆದುಕೊಟ್ಟಿಲ್ಲ ಅಂತ ಉತ್ತರಿಸುತ್ತಾರೆ. ನನ್ನ ತಂದೆ ಬಿಳಿ ಹಾಳೆ ಮೇಲೆ ಮೃತ್ಯುಪತ್ರ ಬರೆದುಕೊಟ್ಟಿದ್ದಾರೆ. ಆ ಮೃತ್ಯುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1988 ರಲ್ಲಿ ಆದ ಮೃತ್ಯುಪತ್ರದ ಆಧಾರದ ಮೇಲಿಂದ ಮ್ಯೂಟೇಶನ ಆಗಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ಮೃತ್ಯುಪತ್ರವನ್ನು ಗ್ರಾಮ ಲೆಕ್ಕಾಧಿಕಾರಿಗೆ ತೋರಿಸಿದ್ದೇನೆ. ನಿಡಿ-2 ಬರೆದುಕೊಡುವಾಗ ನನ್ನ ತಂದೆ-ತಾಯಿ ನಾನು ಕೂಡಿ ಇದ್ದೇವು. ನಿಡಿ-2 ಬರೆಯಲು ನನ್ನ ತಂದೆ ಮಾಹಿತಿ ನೀಡಿದ್ದಾರೆ ನಾನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರ ಬರೆಯುವಾಗ ನನ್ನ ತಂದೆ ಜೊತೆ ನಾನು ಇದ್ದೆ. ನೋಂದಣಿ ಕಚೇರಿಗೆ ಹೋದಾಗ ನಾನು, ನನ್ನ ತಂದೆ, ಧನ್ನು. ಗೇಮು, ಬಾಬು, ಕಮಲಾಬಾಯಿ ಮತ್ತು ಲಲಿತಾ  ನನ್ನ ತಂಗಿ, ಗಂಗುಬಾಯಿ ನನ್ನ ಅಕ್ಕ ಹಾಜರಿದ್ದರು.  ಮೇಲೆ ಹೇಳಿದ ಜನರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ನಿಡಿ-2 ನ್ನು ಬರೆದುಕೊಟ್ಟ 8 ವರ್ಷಗಳ ನಂತರ ನನ್ನ ತಂದೆ ತೀರಿಕೊಂಡರು. ನನ್ನ ತಾಯಿ ಜೀವಂತ ಇದ್ದಾಳೆ. ನನ್ನ ತಾಯಿ ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಅವಳಿಗೆ ಮತಿಭ್ರಮಣೆ ಆಗಿದೆ.



ಮೃತ್ಯುಪತ್ರದ ಆಧಾರದ ಮೇಲೆ ಮ್ಯೂಟೇಶನ ಅರ್ಜಿ ಕೊಟ್ಟಿದ್ದೇನೆ. ಮ್ಯೂಟೇಶನ ನನ್ನ ಹೆಸರಲ್ಲಿ ಆಗಿಲ್ಲ ಆದರೆ ಪಹಣಿಯಲ್ಲಿ ಬಂದಿದೆ. ಮತ್ತೆ ಸಾಕ್ಷಿ ಮುಂದುವರೆದು ಮ್ಯೂಟೇಶನ ನನ್ನ ಹೆಸರಿಗೆ ಆಗಿದೆ ಅಂತ ಉತ್ತರಿಸುತ್ತಾರೆ.  ನನ್ನ ಹೆಸರು ಪಹಣಿಯಲ್ಲಿ ಮಾಲೀಕ ಅಂತ ಬಂದಿದೆ. ಮೃತ್ಯುಪತ್ರದಲ್ಲಿ ನಮೂದಿಸಿದ ಸ್ವತ್ತು

ನನ್ನ ತಾಯಿಯ ಹೆಸರಲ್ಲಿ ಇತ್ತು. ನನ್ನ ತಾಯಿ ಮತ್ತು ಅಕ್ಕ ಖರೀದಿ ಹಿಡಿದಿದ್ದರು. ನನ್ನ ತಾಯಿ ಖರೀದಿ ಹಿಡಿದ ಖರೀದಿ ಪತ್ರ ಹಾಜರುಪಡಿಸಿದ್ದೇನೆ. ಖರೀದಿ ಪತ್ರ ಆದ ವರ್ಷ 1991 ರಲ್ಲಿ ನನ್ನ ವಯಸ್ಸು 18 ಇತ್ತು. ನಾನು 10 ನೇ ತರಗತಿವರೆಗೆ ಶಾಲೆ ಕಲಿತ್ತಿದ್ದು ಶಾಲಾ ದಾಖಲಾತಿಯಲ್ಲಿ ನನ್ನ ವಯಸ್ಸು ದಾಖಲಾಗಿದೆ. 1991 ರಲ್ಲಿ ನನಗೆ 18 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಖರೀದಿ ಹಿಡಿದ ವಿಷಯ ಗೊತ್ತಿದೆ. ನನ್ನ ಅಕ್ಕ ಪಾರುಬಾಯಿ ಇದ್ದಾಳೆ. ಅವಳು ಚೆನ್ನಾಗಿದ್ದಾಳೆ. ಮೃತ್ಯುಪತ್ರದಲ್ಲಿ ಒಂದು ಮನೆ ಬಗ್ಗೆ ಬರೆದಿದ್ದು ನನ್ನ ತಂದೆಯ ಜಾಗ ಇತ್ತು ಅದರಲ್ಲಿ ನಾನು ಮನೆ ಕಟ್ಟಿದ್ದೇನೆ. ಅಣ್ಣ-ತಮ್ಮಂದಿರ ಪಾಲುದಾರಿಕೆಯಲ್ಲಿ ನನ್ನ ತಂದೆಗೆ ಅದು ಬಂದಿತ್ತು. ನನ್ನ ತಂದೆ-ತಾಯಿಗೆ ಮೃತ್ಯುಪತ್ರ ಮಾಡಿಕೊಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಅದು ಹಿರಿಯರ ಆಸ್ತಿ ಎಂದರೆ ಸರಿಯಲ್ಲ.

1988 ರಲ್ಲಿ ನನ್ನ ತಂದೆ ನನಗೆ ಯಾವುದೇ ಆಸ್ತಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. 1988 ರಲ್ಲಿ ನನ್ನ ತಂದೆ ಯಾವುದೇ ಆಸ್ತಿಯ ಬಗ್ಗೆ ಕಾಗದ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಶಾಲೆಗೆ ಹೋಗುತ್ತಿದ್ದೇ ಎಂದು ಉತ್ತರಿಸುತ್ತಾರೆ. ನನ್ನ ತಂದೆ 1988 ರಲ್ಲಿ ಒಂದು ಜಮೀನು ನನ್ನ ಹೆಸರಿಗೆ ಬರೆದುಕೊಟ್ಟ ಬಗ್ಗೆ ಯಾವುದೇ ಕಾಗದ ಇಲ್ಲ ಎಂದರೆ ಸರಿ. ನನ್ನ ತಂದೆ 1988 ರಲ್ಲಿ ದಾವಾ ಸ್ವತ್ತಿನ ಬಗ್ಗೆ ಯಾವುದೇ ಕಾಗದ ಬರೆದುಕೊಟ್ಟಿಲ್ಲದ ಕಾರಣ ನಾನು ದಾವಾ ಸ್ವತ್ತಿನ ಮಾಲೀಕಳು ಅಲ್ಲ ಎಂದರೆ ಸರಿಯಲ್ಲ.



ನಾನು ವಾದಿಯ ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ನಿಡಿ-7 ನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಹಿಂದಿನ ದಿನಾಂಕ ನಮೂದಿಸಿ ಕಾಗದ ಬರೆದ ಕಾರಣ ನನ್ನ ತಂದೆಯ ಹೆಸರನ್ನು ನನ್ನ ಗಂಡನ ಹೆಸರು ನಾಮದೇವ ಅಂತ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅಕ್ಕ ಇಬ್ಬರು ಸೇರಿ ಸರ್ವೆ ನಂಬರ 320/12/3 8 ಎಕರೆ ಖರೀದಿ ಮಾಡಿರುತ್ತಾರೆ. ಅದರಲ್ಲಿ 4 ಎಕರೆ 29 ಗುಂಟೆ ನನ್ನ ತಾಯಿ ಜಮೀನು. ನನ್ನ ತಾಯಿ ಮತ್ತು ಅಕ್ಕ ಇಬ್ಬರು ಭಾಗ ಮಾಡಿಕೊಂಡಿದ್ದಾರೆ. ಅವರು ಲಿಖಿತವಾಗಿ ಪಾಲು ಮಾಡಿಕೊಂಡಿದ್ದಾರೆ. ಅದು ಬಿಳಿ ಹಾಳೆಯ ಮೇಲಿದೆ. ಆ ಕಾಗದ ನಾನು ನೋಡಿಲ್ಲ. ಆ ಕಾಗದ ಯಾರು ಹತ್ತಿರ ಇದೆ ಅಂತ ಗೊತ್ತಿಲ್ಲ. ಆ ಕಾಗದ ಸುಮಾರು 10 ವರ್ಷಗಳ ಹಿಂದೆ ಆಗಿದೆ. ನಿಖರವಾದ ದಿನಾಂಕ ಗೊತ್ತಿಲ್ಲ. ಆ ಕಾಗದಕ್ಕೆ ಸಾಕ್ಷಿದಾರರು ಸಹಿ ಮಾಡಿದ್ದು ಗೊತ್ತಿಲ್ಲ. ಆ ಕಾಗದ ನೋಂದ ಆಗಿದೆ. ನನ್ನ ತಾಯಿ ಮತ್ತು ಅಕ್ಕ ಪಾಲು ಮಾಡಿಕೊಂಡ

ಯಾವುದೇ ಕಾಗದ ಹಾಜರುಪಡಿಸಿಲ್ಲ ಎಂದರೆ ಸರಿ. ಪಹಣಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅಕ್ಕ ಪಾಲು ಮಾಡಿಕೊಂಡಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೋನಾಬಾಯಿ ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೇಶುಬಾಯಿ ಮಾಡಿಕೊಂಡ ವ್ಯವಹಾರ 1999 ರಲ್ಲಿ ನನ್ನ ಸಮಕ್ಷಮ ಆಗಿಲ್ಲ. ಎಷ್ಟು ರೂಪಾಯಿಗೆ ಕ್ರಯವಾಯಿತು ಎನ್ನುವ ವಿಷಯ ಗೊತ್ತಿಲ್ಲ ಎಂದರೆ ಸರಿ. 1991 ರಲ್ಲಿ ಕೇಶುಬಾಯಿ ಹೆಸರಿಗೆ ನನ್ನ ತಂದೆ ಹಣ ಕೊಟ್ಟು ಅವಳ ಹೆಸರಲ್ಲಿ ಖರೀದಿ ಮಾಡಿದ್ದಾನೆ ಎಂದರೆ ಸರಿ. ನನ್ನ ತಂದೆ ಕ್ರಯ ಪತ್ರಕ್ಕೆ ಹಣ ಕೊಟ್ಟಿದರಿಂದ ವಾದಿಗೆ ಆ ಜಮೀನದಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.



ವಾದಿಯ ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ದಾಖಲೆಗಳನ್ನು ಸೃಷ್ಟಿಪಡಿಸಿದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಪಾಲು ಇದ್ದು ಅವಳಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸಹಿತ ತಂದೆ-ತಾಯಿಗಳ ಸೇವೆ ಮಾಡಿದ್ದರಿಂದ ಅವಳಿಗೂ ಪಾಲು ಇದೆ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಕ್ರಮ ಸಂಖ್ಯೆ 1 ರಿಂದ 5 ಮತ್ತು ನಾನು ಕೂಡಿಕೊಂಡು ವಾದಿಗೆ ಹಕ್ಕು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ